MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | THURSDAY | 16-2-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಕಚ್ಚಾ ಗೋಡಂಬಿ ದೇಶೀ ಉತ್ಪಾದನೆ ಅಂದಾಜಿಗಿಂತ ಇಳಿಕೆ ಸಾಧ್ಯತೆ

ಗೋಡಂಬಿ ಈ ವರ್ಷ ಹಿಂದಿನ ವರ್ಷದ ಅವಧಿಗಿಂತ ಮೊದಲೇ ಹೂವು ಕಾಣಲಾರಂಬಿಸಿದರೂ, ಅಧಿಕ ಇಬ್ಬನಿ ಪ್ರತಿಕೂಲ ಹವಾಮಾನದಿಂದ ಹೂವು ಫಲವಾಗುವ ಅಂಶ ಆರಂಭದಲ್ಲಿ ಇಳಿಕೆಯಾಗಿದೆ. ಇದರಿಂದ ಕಚ್ಚಾ ಗೋಡಂಬಿ ಉತ್ಪಾದನೆ ಮೊದಲಿನ ಅಂದಾಜಿಗಿಂತ ಇಳಿಕೆಯಾಗುವ ಸಾಧ್ಯತೆಯಿದೆ. ಮುಂದಿನ ತಿಂಗಳಲ್ಲಿ ಆವಕದ ಪ್ರಮಾಣ ಹಾಗೂ ಉತ್ಪಾದನೆಯ ಸ್ಥಿತಿ ಲಭ್ಯವಾಗಬಹುದು.

## ಭಾರತದ ಪಾಮೆಣ್ಣೆ ದಾಸ್ತಾನು ಹೆಚ್ಚಳ ಅನುಕೂಲಕರ ಸ್ಥಿತಿ

2023, ಫೆಬ್ರವರಿ 1 ಕ್ಕೆ, ಭಾರತದಲ್ಲಿ 3.6 ಮಿಲಿಯನ್ ಟನ್ ಪಾಮೆಣ್ಣೆ ದಾಸ್ತಾನಿದೆಯೆನ್ನಲಾಗಿದ್ದು, ಹಿಂದಿನ ವರ್ಷ ಈ ಅವಧಿಯಲ್ಲಿನ ದಾಸ್ತಾನು 1.83 ಮಿಲಿಯನ್ ಟನ್‌ಗಳೆನ್ನಲಾಗಿದೆ. ಇದರಿಂದ ಕೆಲವು ಪಾಮೆಣ್ಣೆ ರಫ್ತು ಪರವಾಗಿ ರದ್ದು ಮಾಡುವ ಇಂಡೋನೇಶೀಯಾದ ನಿರ್ಧಾರದಿಂದ ಭಾರತಕ್ಕೆ ಸಮಸ್ಯೆಯಾಗದೆನ್ನಲಾಗಿದೆ. ಹಿಂದಿನ ವಾರ ಇಂಡೋನೇಶಿಯಾ ಅಲ್ಲಿನ ದೇಶೀ ಪೂರೈಕೆ ಬಲಪಡಿಸಲು ಕೆಲವು ರಫ್ತು ಪರವಾನಗೆ ರದ್ದು ಪಡಿಸುವ ನಿರ್ಧಾರ ಪ್ರಕಟಪಡಿಸಿತ್ತೆನ್ನಲಾಗಿದೆ. ನವೆಂಬರ್ 2022 ರಿಂದ ಜನವರಿ 2023 ರ ವರೆಗಿನ 2022–23 ನೇ ಸಾಲಿನ ಪ್ರಥಮ 3 ತಿಂಗಳಲ್ಲಿ ಭಾರತದ ಪಾಮೆಣ್ಣೆ ಆಮದು 25 ಶೇಕಡಾ ಹೆಚ್ಚಳವಾಗಿ 4.5 ಮಿಲಿಯನ್ ಟನ್‌ಗಳಾಗಿವೆಯೆನ್ನಲಾಗಿದೆ.

## ಅಡಿಕೆಯ ಕನಿಷ್ಠ ಆಮದು ಬೆಲೆ ಹೆಚ್ಚಳ

**DGFT** ಅಡಿಕೆಯ ಕನಿಷ್ಠ ಆಮದು ದರವನ್ನು ಕೆ.ಜಿ.ಗೆ ಈಗಿರುವ ರೂ.251 ರಿಂದ ರೂ 351 ಕ್ಕೆ ಹೆಚ್ಚಳಗೊಳಿಸಿದೆಯೆನ್ನಲಾಗಿದೆ. CIF ದರ ರೂ 351 ಕ್ಕಿಂತ ಹೆಚ್ಚಳವಿದ್ದಲ್ಲಿ ಅಥವಾ 100 ಶೇಕಡಾ ರಫ್ತು ಉದ್ದೇಶಿತ ಯುನಿಟ್‌ಗಳಿಗೆ ಅನ್ವಯವಾಗುವುದೆಲ್ಲವೆನ್ನಲಾಗಿದೆ.

## ಸೋಯಾಮೀಲ್ ರಫ್ತು ದುಪ್ಪಟ್ಟಿಗಿಂತ ಹೆಚ್ಚಳ ಸಾಧ್ಯತೆ

ಭಾರತೀಯ ಸೋಯಾಮೀಲ್ ದಕ್ಷಿಣ ಪೂರ್ವ ಏಷ್ಯಾದ ರಾಷ್ಟ್ರಗಳು ಹಾಗೂ ದೂರ ಪೂರ್ವ ರಾಷ್ಟ್ರಗಳಿಂದ ಬೇಡಿಕೆ ಹೆಚ್ಚಳದಿಂದ ಈ ವರ್ಷ ಅದರ ರಫ್ತು ದುಪ್ಪಟ್ಟಿಗಿಂತ ಅಧಿಕವಾಗಬಹುದೆನ್ನಲಾಗಿದೆ. ವರ್ಷದ ಪ್ರಥಮ 4 ತಿಂಗಳುಗಳಲ್ಲಿ ರಫ್ತು 65 ಶೇಕಡಾ ಹೆಚ್ಚಳದೊಂದಿಗೆ 6.31 ಲಕ್ಷ ಟನ್‌ಗಳಾಗಿವೆಯೆನ್ನಲಾಗಿದೆ. ಬ್ರೆಜಿಲ್, ಅರ್ಜೆಂಟಿನಾಗಳ ಪ್ರತಿಕೂಲ ಹವಾಮಾನದಿಂದ ಜಾಗತಿಕ ಸೋಯಾಮಿಲ್ ದರ ಹೆಚ್ಚಳವಾಗುತ್ತಿದೆಯೆನ್ನಲಾಗಿದೆ. ಭಾರತದ ಸೋಯಾಮಿಲ್‌ಗೆ ವಿಯೆಟ್ನಾಂ, ಜಪಾನ್ ಮುಂತಾದ ರಾಷ್ಟ್ರಗಳಿಂದ ಬೇಡಿಕೆ ಅಧಿಕವಾಗುತ್ತಿದೆಯೆನ್ನಲಾಗಿದೆ. ಈಗಾಗಲೇ ರಫ್ತು ಹಿಂದಿನ ವರ್ಷದಲ್ಲಾದರ ಸಮೀಪ (6.4 ಲಕ್ಷ ಟನ್) ವಿದ್ದು ಈ ವರ್ಷದ ರಫ್ತು 14–15 ಲಕ್ಷ ಟನ್‌ಗಳಿಗೇರಬಹುದೆಂದು SOPA ದ ಡೈರೆಕ್ಟರ್ ಡಿ.ಎನ್.ಪಾಠಕ್ ಅಂದಾಜಿಸಿದ್ದಾರೆನ್ನಲಾಗಿದೆ. ಸೋಯಾಬೀನ್ ಪೂರೈಕೆ ಹೆಚ್ಚಳವಿರುವುದರಿಂದ ಅರೆಯುವಿಕೆಯ ಪ್ರಮಾಣ 52 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ಪ್ರಥಮ 4 ತಿಂಗಳ ಸೋಯಾಮೀಲ್ ಉತ್ಪಾದನೆ 35 ಲಕ್ಷ ಟನ್‌ಗಳಾಗಿದ್ದು ಹಿಂದಿನ ವರ್ಷ 22.75 ಲಕ್ಷ ಟನ್ ಇದೇ ಅವಧಿಯ ಉತ್ಪಾದನೆಯೆನ್ನಲಾಗಿದೆ. ಫೀಡ್ಸ್ ವಿಭಾಗದ ಬಳಕೆ ಪ್ರಥಮ 4 ತಿಂಗಳಲ್ಲಿ 24 ಲಕ್ಷ ಟನ್‌ಗಳಾಗಿದ್ದು ಹಿಂದಿನ ವರ್ಷ 21.50 ಲಕ್ಷ ಟನ್ ಗಳೆನ್ನಲಾಗಿದೆ.